

# ಸಂಜ್ಞೆ ಭಾಷೆಗೆ ಟೆಕ್ ಜೀವ

ದೈನಂದಿನ ಕೆಲಸ ಕಾರ್ಯಗಳ ಅಗತ್ಯಕ್ಕೆ ತಕ್ಕಂತೆ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಮುಂದಿರುವ ಗೂಗಲ್ ಕಿವುಡರ ಅನುಕೂಲಕ್ಕೆ ಕೃತಕ ಬುದ್ಧಿಮತ್ತೆಯ ಹೊಸ ಟೂಲ್ ಪರಿಚಯಿಸಿದೆ.

■ ಶಶಿಕುಮಾರ್ ಸಿ.

ಜನರ ದೈನಂದಿನ ಬದುಕಿಗೆ ನೆರವಾಗುವಂತಹ ತಂತ್ರಜ್ಞಾನಕ್ಕೆ ಆದ್ಯತೆ ನೀಡುವ ಗೂಗಲ್, ತನ್ನ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಹೊಸ ಫೀಚರ್ ಪರಿಚಯಿಸಿದೆ. ಅದುವೇ 'ಸೈನ್‌ಜೆಮ್ಮಾ'. ಎಐನ ಈ ಟೂಲ್ ಸಂಜ್ಞೆ ಭಾಷೆಯನ್ನು ಮಾತನಾಡುವ ಭಾಷಾ ರೂಪದ ಪಠ್ಯವಾಗಿ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್‌ಗಳಲ್ಲಿ ಪರಿವರ್ತಿಸಿ, ಮಾತು ಬಾರದವರೊಡನೆ, ಕಿವುಡರೊಡನೆ ಸಂವಹನಕ್ಕೆ ನೆರವಾಗುತ್ತದೆ.

ಪ್ರತಿ ವರ್ಷವೂ ಗೂಗಲ್ ವಾರ್ಷಿಕ ಕಾರ್ಯಕ್ರಮ ನಡೆಸುತ್ತದೆ. 'ಗೂಗಲ್ ಐ/ಒ 2025' ಹೆಸರಿನಲ್ಲಿ ಅಂತಹದ್ದೇ ಕಾರ್ಯಕ್ರಮವನ್ನು ಗೂಗಲ್ ಈ ಬಾರಿಯೂ ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಸೈನ್‌ಜೆಮ್ಮಾ ಎಂಬ ಸುಧಾರಿತ ಕೃತಕ ಬುದ್ಧಿಮತ್ತೆ ಮಾದರಿಯ ಬಗ್ಗೆ ಅಧಿಕೃತವಾಗಿ ಮಾಹಿತಿ ಹಂಚಿಕೊಳ್ಳಲಾಯಿತು.

ನೈಜ ಸಮಯದಲ್ಲಿ ಸೈನ್ ಲ್ಯಾಂಗ್ವೇಜ್ ಅನ್ನು ಪಠ್ಯ ರೂಪದಲ್ಲಿ ಪರಿವರ್ತಿಸುವ ಸಾಮರ್ಥ್ಯವನ್ನು ಈ ಸೈನ್‌ಜೆಮ್ಮಾ ಹೊಂದಿದೆ. ಪಠ್ಯದ ಜೊತೆಗೆ ಅದನ್ನು ಓದಿ ಹೇಳುವ ಸಾಮರ್ಥ್ಯವನ್ನು ಇದು ಹೊಂದಿದೆ. ಈ ಕೃತಕ ಬುದ್ಧಿಮತ್ತೆ ಸಾಧನದಿಂದ ಕಿವುಡರು ಹಾಗೂ ಮೂಗರಿಗೆ ಹೆಚ್ಚು ಅನುಕೂಲವಾಗಲಿದೆ. ಗೂಗಲ್ ಸಹ ವಿಶೇಷವಾಗಿ ಮೂಗರು ಹಾಗೂ ಕಿವಿ ಕೇಳದವರಿಗೆಂದೇ ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಿದೆ. ಇದು ಅವರಿಗೆ ಇತರರೊಂದಿಗೆ ಸಂವಹನ ನಡೆಸಲು ಸಹಾಯ ಮಾಡುತ್ತದೆ.

## ಗೂಗಲ್‌ನ ಅತ್ಯಾಧುನಿಕ ಮಾದರಿ

ಸೈನ್‌ಜೆಮ್ಮಾ ಕೃತಕ ಬುದ್ಧಿಮತ್ತೆ ಆಯ್ಕೆಯು ಗೂಗಲ್‌ನ ಇದುವರೆಗಿನ ಸೈನ್ ಲ್ಯಾಂಗ್ವೇಜ್‌ನ ಅರ್ಥಮಾಡಿಕೊಳ್ಳುವ ಅತ್ಯಾಧುನಿಕ ಮಾದರಿಯಾಗಿ ರೂಪುಗೊಂಡಿದೆ. ಈ ಮಾದರಿಯನ್ನು ಇನ್ನಷ್ಟು ಸುಧಾರಿಸಲು ಇದರಲ್ಲಿ ಭಾಗವಹಿಸಲು ಡೆವಲಪರ್‌ಗಳು ಹಾಗೂ ಸಂಶೋಧಕರಿಗೆ ಮುಕ್ತ ಅವಕಾಶವನ್ನು ಕಂಪನಿಯು ಕಲ್ಪಿಸಿಕೊಟ್ಟಿದೆ.

ಈ ಬಗ್ಗೆ ಮಾತನಾಡಿರುವ ಜೆಮ್ಮಾ ಉತ್ಪನ್ನದ ವ್ಯವಸ್ಥಾಪಕ ಗಸ್ ಮಾರ್ಟಿನ್ಸ್, 'ಸೈನ್‌ಜೆಮ್ಮಾ ಮಾದರಿಯು ವಿವಿಧ ಸೈನ್ ಲ್ಯಾಂಗ್ವೇಜ್‌ಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದೆ. ಇದೀಗ ಅದು ಅಮೆರಿಕನ್ ಸೈನ್ ಲ್ಯಾಂಗ್ವೇಜ್ (ASL) ಮತ್ತು ಇಂಗ್ಲಿಷ್‌ನೊಂದಿಗೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತದೆ' ಎಂದಿದ್ದಾರೆ. ಪ್ರಸ್ತುತ ಈ ತಂತ್ರಜ್ಞಾನವು ಸಂಜ್ಞೆ ಭಾಷೆಯನ್ನು ಕೇವಲ ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಪಠ್ಯ ರೂಪದಲ್ಲಿ ಒದಗಿಸುತ್ತದೆ.

### ಪ್ರಾದೇಶಿಕ ಭಾಷೆಗಳಿಗೆ ಒತ್ತು

ಯಾವುದೇ ತಂತ್ರಜ್ಞಾನ ಹೆಚ್ಚು ಬಳಕೆಯಾಗಬೇಕೆಂದರೆ ಅದು ಸ್ಥಳೀಯ ಹಾಗೂ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗಬೇಕು. ಜನರಿಗೆ ಸುಲಭವಾಗಿ ಅದು ಅರ್ಥವಾಗಬೇಕು. ತಂತ್ರಜ್ಞಾನ ಅಭಿವೃದ್ಧಿಪಡಿಸುವ ಕಂಪನಿಗಳು ಸಹ ಪ್ರಾದೇಶಿಕ ಭಾಷೆಗಳಲ್ಲಿ ತಮ್ಮ ಸೇವೆಯನ್ನು ಕಲ್ಪಿಸಬೇಕು. ಹೀಗಾಗಿ, ಸೈನ್‌ಜೆಮ್ಮಾವು ಸಂಪೂರ್ಣವಾಗಿ ಬಳಕೆಗೆ ಸಿದ್ಧವಾಗುವ ವೇಳೆಗೆ ಗೂಗಲ್, ಸಾಧ್ಯವಿರುವ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಈ ಸೇವೆಯನ್ನು ಒದಗಿಸುವ ಸಾಧ್ಯತೆ ಇದೆ.

'ಸೈನ್‌ಜೆಮ್ಮಾ'ವನ್ನು ನಿಖರ ಮತ್ತು ರಿಯಲ್ ಟೈಂನಲ್ಲಿ ಸಂಜ್ಞೆ ಭಾಷೆಯನ್ನು ಪಠ್ಯವಾಗಿ ಪರಿವರ್ತಿಸಲೆಂದು ವಿನ್ಯಾಸಗೊಳಿಸಲಾಗಿದೆ. ಈ ತಂತ್ರಜ್ಞಾನವು ಕಿವುಡರು ಹಾಗೂ ಮೂಗರ ಸಂವಹನಕ್ಕೆ ಹೊಸ ತಿರುವು ಸಿಕ್ಕಂತಾಗುತ್ತದೆ. ಸಾಮಾನ್ಯವಾಗಿ ಸಂಜ್ಞೆ ಭಾಷೆಯು ಆ ಭಾಷೆಯನ್ನು ಕಲಿತವರಿಗೆ ಮಾತ್ರ ಅರ್ಥವಾಗಲು ಸಾಧ್ಯ. ಸೈನ್‌ಜೆಮ್ಮಾದಿಂದ ಯಾರು ಬೇಕಾದರೂ ಭಾಷೆಯನ್ನು ಸುಲಭವಾಗಿ ಸಂಹವನ ನಡೆಸಬಹುದು. ಜೊತೆಗೆ ಕಿವುಡರು ಹಾಗೂ ಮೂಗರು ಸ್ವಾವಲಂಬಿಗಳಾಗಲು ನೆರವಾಗುತ್ತದೆ.

ಡೀಪ್‌ಮೈಂಡ್ ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ದೈಹಿಕ ನ್ಯೂನತೆಯಿಂದ ಸಂಕಷ್ಟ ಎದುರಿಸುತ್ತಿರುವ, ಪ್ರಪಂಚದಾದ್ಯಂತ ಇರುವ ಕಿವುಡ ಸಮುದಾಯದ ಅನುಭವಗಳು, ಅವರ ಅಗತ್ಯಗಳು ಹಾಗೂ ಸಲಹೆಗಳನ್ನು ಪಡೆದುಕೊಂಡು ಸೈನ್‌ಜೆಮ್ಮಾವನ್ನು ಅಭಿವೃದ್ಧಿಪಡಿಸಲಾಗಿದೆ. ಭವಿಷ್ಯದಲ್ಲಿ ಇದು ಈ ಸಮುದಾಯಕ್ಕೆ ದೊಡ್ಡ ಅಸ್ತ್ರವಾಗಲಿದೆ ಎಂದಿದೆ. ಈ ಮಾದರಿಯು ಸದ್ಯ ಪರೀಕ್ಷಾ ಹಂತದಲ್ಲಿದ್ದು, 2025ರ ಅಂತ್ಯದ ವೇಳೆಗೆ ಸಾರ್ವಜನಿಕಗೊಳಿಸುವ ಸಾಧ್ಯತೆ ಇದೆ. ಅಲ್ಲದೇ, ಪರೀಕ್ಷಾ ಹಂತದಲ್ಲಿರುವ ಈ ಮಾದರಿಯನ್ನು ಇನ್ನಷ್ಟು ಉತ್ತಮಗೊಳಿಸಲು ಸಂಶೋಧಕರು, ಡೆವಲಪರ್‌ಗಳು ಹಾಗೂ ಜಾಗತಿಕ ಕಿವುಡ ಸಮುದಾಯಗಳನ್ನು ಬಳಸಿಕೊಳ್ಳಲಿದೆ. ಈ ತಂತ್ರಜ್ಞಾನವನ್ನು ಪರೀಕ್ಷಿಸಲು ಮತ್ತು ಪ್ರತಿಕ್ರಿಯೆ ನೀಡಲು ಅವರನ್ನು ಕಂಪನಿಯು ಕೋರಿದೆ. ಕಿವುಡರು ಹಾಗೂ ಮೂಕರನ್ನು ಈ ಪರೀಕ್ಷೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಅವರ ಅಗತ್ಯಗಳಿಗೆ ತಕ್ಕಂತೆ ಸೈನ್‌ಜೆಮ್ಮಾವನ್ನು ಪರಿಣಾಮಕಾರಿಯಾಗಿ ರೂಪಿಸಲು ಸಾಧ್ಯವಾಗಲಿದೆ. ■